## ಟೆಂಪೊ ಅಪ್ಲಿಕೇಶನ್





ಕ್ಯಾಲೆಂಡರ್ ಮತ್ತು ವೇಳಾಪಟ್ಟಿ ರೂಪಿಸಲು ನೆರವಾಗುವ ಟೆಂಪೊ ಅಪ್ಲಿಕೇಶನ್ ಈಗ ಭಾರಿ ಜನಪ್ರಿಯ. ಬಳಕೆದಾರರು ತಮ್ಮ ವಹಿವಾಟಿನ ಚಟುವಟಿಕೆಗಳನ್ನು ಫೋನಿನಲ್ಲೇ ನಿಯಂತ್ರಿಸಲು, ಕಾನ್ಫರೆನ್ಸ್ ಕರೆಗಳನ್ನು ಸ್ವೀಕರಿಸಲು, ಸಭೆ ನಡೆಯುವ ಸ್ಥಳಗಳಿಗೆ ತೆರಳಬೇಕಾದಾಗ ಮಾರ್ಗದರ್ಶನ ಪಡೆಯಲು ಈ ಟೆಂಪೊ ಅತ್ಯಂತ ಅನುಕೂಲಕರ.

ಈ ಅಪ್ಲಿಕೇಶನ್ ರೂಪಿಸಿರುವ ಎಸ್‌ಆರ್‌ಐ ಇಂಟರ್‌ನ್ಯಾಷನಲ್ ಕಂಪೆನಿಯು ಅಪ್ಲಿಕೇಶನ್ ಬೇಡಿಕೆ ಇಟ್ಟವರ ನೋಂದಣಿ ಶುರು ಮಾಡಿದೆ. ಈಗಾಗಲೇ 7 ಲಕ್ಷ ಜನ ಬೇಡಿಕೆ ಮುಂದಿಟ್ಟಿದ್ದಾರೆ ಎನ್ನುತ್ತಾರೆ ಕಂಪೆನಿಯ ಸಿಇಒ ರಾಜ್ ಸಿಂಗ್. ನಂತರ ಕಂಪೆನಿಯು ಬಳಕೆದಾರರ ಕ್ಯಾಲೆಂಡರ್, ಅಡ್ರೆಸ್ ಬುಕ್, ಇ-ಮೇಲ್ ಖಾತೆಗಳಿಗೆ ಸಾಫ್ಟ್‌ವೇರ್ ಸಂಪರ್ಕ ಕಲ್ಪಿಸಿಕೊಡುತ್ತದೆ.

## ಸ್ಮಾರ್ಟ್‌ಫೋನ್‌ನಲ್ಲೂ ಕ್ಲೌಡ್‌ಆನ್

ಆ್ಯಂಡ್ರಾಯ್ಡ್ ಟ್ಯಾಬ್ಲೆಟ್‌ಗಳಲ್ಲಿ ಮೈಕ್ರೋಸಾಫ್ಟ್ ಆಫೀಸ್ ಸಂಪರ್ಕ ಕಲ್ಪಿಸುವ ಕ್ಲೌಡ್‌ಆನ್ ಅಪ್ಲಿಕೇಶನ್ ಈಗ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲೂ ಲಭ್ಯ. ಗ್ಯಾಲಕ್ಸಿ ಎಸ್3 ಅಂತಹ ಫೋನ್‌ಗಳಲ್ಲಿ ಈ ಅಪ್ಲಿಕೇಶನ್‌ನಿಂದ ಡಾಕ್ ಫೈಲ್‌ಗಳನ್ನು ಸೃಷ್ಟಿಸಬಹುದು, ಎಡಿಟ್ ಮಾಡಬಹುದು ಹಾಗೂ ಇನ್ನೊಂದು ಡಿವೈಸ್‌ನಲ್ಲಿ ಹಂಚಿಕೊಳ್ಳಬಹುದು. ಸ್ಮಾರ್ಟ್‌ಫೋನ್ ಸಲುವಾಗಿಯೇ ಮೈಕ್ರೋಸಾಫ್ಟ್ ಆಫೀಸ್‌ನ ಪರಿಷ್ಕೃತ ಆವೃತ್ತಿಯನ್ನು ಕ್ಲೌಡ್‌ಆನ್ ನೀಡುತ್ತದೆ. ಇದರಿಂದ ಐಕಾನ್‌ಗಳು ದೊಡ್ಡದಾಗಿ ಕಾಣುತ್ತವೆ. ಅಕ್ಷರಗಳ ಗಾತ್ರದ ಆಯ್ಕೆ ಅಥವಾ ಟೇಬಲ್ ರಚನೆ ಕೂಡಾ ಇದರಲ್ಲಿ ಸುಲಭ.




## ಬ್ಯಾಟರಿಗುರು

ಮೊಬೈಲ್ ಬ್ಯಾಟರಿ ದೀರ್ಘ ಕಾಲ ಸೇವೆ ಒದಗಿಸಬೇಕಾ? ಹಾಗಿದ್ದರೆ 'ಬ್ಯಾಟರಿಗುರು' ಅಪ್ಲಿಕೇಶನ್ ಬಳಸಿ. ಇದು ಸ್ಮಾರ್ಟ್‌ಫೋನ್ ಬ್ಯಾಟರಿಯ ಅವಧಿ ಹೆಚ್ಚಾಗುವಂತೆ ಮಾಡಬಲ್ಲದು. ಇದನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಅಳವಡಿಸಿಕೊಳ್ಳಬಹುದು. ಇದಕ್ಕೆ ಯಾವುದೇ ಮ್ಯಾನುವಲ್ ಕಾನ್ಫಿಗ್ಯುರೇಶನ್ ಅಗತ್ಯವಿಲ್ಲ. ಬ್ಯಾಕ್‌ಗ್ರೌಂಡ್‌ನಲ್ಲಿ ಓಡುವುದರಿಂದ ಬಳಕೆದಾರರಿಗೆ ಫೋನ್ ಅನ್ನು ಬಳಸಲು ಅನುಕೂಲ. ಅಪ್ಲಿಕೇಶನ್ ಅಳವಡಿಸಿಕೊಂಡು 2-4 ದಿನಗಳ ನಂತರ ಬಳಕೆದಾರರು ಮೊಬೈಲ್ ಬಳಸುವ ರೀತಿಯನ್ನು ಅರಿತು ಬ್ಯಾಟರಿ ಅವಧಿ ಹೆಚ್ಚಿಸುವುದು ಹೇಗೆ ಎಂಬುದರ ಬಗ್ಗೆ ಮಾಹಿತಿ ನೀಡುತ್ತದೆ. ಅನಗತ್ಯ ಬ್ಯಾಕ್‌ಗ್ರೌಂಡ್ ಚಟುವಟಿಕೆಯನ್ನು ಕಡಿಮೆ ಮಾಡುತ್ತದೆ. ವೈ-ಫೈ ಎಲ್ಲಿ ಅಗತ್ಯವೋ ಅಲ್ಲಿ ಮಾತ್ರ ಅದನ್ನು ಸಂಪರ್ಕಿಸುತ್ತದೆ.




ಈ ಅಪ್ಲಿಕೇಶನ್ ಸದ್ಯ ಅಮೆರಿಕ ಮತ್ತು ಯೂರೋಪ್‌ನಲ್ಲಿ ಲಭ್ಯವಿದ್ದು ಶೀಘ್ರದಲ್ಲೇ ಭಾರತಕ್ಕೂ ಬರಲಿದೆ ಎಂದಿದೆ ಶಿಯಾಮ್ ಟೆಕ್ನಾಲಜೀಸ್ ಕಂಪೆನಿ.



## ಬ್ಯಾಟರಿ ಬಳಕೆ ಹೇಗೆ?

ನೋಕಿಯಾ ಲ್ಯೂಮಿಯಾ 920 ಹಾಗೂ ಎಚ್‌ಟಿಸಿ ವಿಂಡೋಸ್ ಫೋನ್ 8ಎಕ್ಸ್ ಬಳಕೆದಾರರ ದೂರೆಂದರೆ ಬ್ಯಾಟರಿ ಬಹಳ ಕಾಲ ಬಾಳುವುದಿಲ್ಲ ಎಂಬುದು. ಆದರೆ ಫೋನ್‌ನಲ್ಲಿ ಕೆಲವು ಹೊಂದಾಣಿಕೆ ಮಾಡಿಕೊಂಡರೆ ಬ್ಯಾಟರಿ ದೀರ್ಘಕಾಲ ಬಾಳಬಲ್ಲದು.

ಅಡ್ವಾನ್ಸ್‌ಡ್ ಮೇಲೆ ಟ್ಯಾಪ್ ಮಾಡಿ. 'ನೋಟಿಫೈ ಮಿ ವೆನ್ ನ್ಯೂ ನೆಟ್‌ವರ್ಕ್ಸ್ ಆರ್ ಅವೈಲೇಬಲ್' ಅನ್‌ಚೆಕ್ ಮಾಡಿ. 'ಟ್ಯಾಪ್ ಮತ್ತು ಸೆಂಡ್' ಅನ್ನು ಆಫ್ ಮಾಡಿ. ಇ-ಮೇಲ್ ಖಾತೆಗೆ 'ಡೌನ್‌ಲೋಡ್ ನ್ಯೂ ಕಂಟೆಂಟ್' ಹೊಂದಿಸಿಕೊಂಡು ಕನಿಷ್ಠ ಫ್ರೀಕ್ವೆನ್ಸಿ ಇಡಿ. ಬ್ಯಾಕಪ್ ಡೇಟಾ ಮ್ಯಾನುವಲ್ ಆಗಿ ಮಾಡಿ. 'ಕನೆಕ್ಟ್ ವಿದ್ ಎಕ್ಸ್‌ಬಾಕ್ಸ್' ಕೂಡಾ ಆಫ್ ಮಾಡಿ. ಇದರಿಂದ ಬ್ಯಾಟರಿ ದೀರ್ಘಕಾಲದವರೆಗೆ ಬರುತ್ತದೆ.

■ ಎಸ್. ತುಂಬೆ